ನಾನು ಹುಬ್ಬಳ್ಳಿಗೆ ಹೋಗಿ, ಒಮ್ಮೊಮ್ಮೆ ಅವರ ಅತಿಥಿಯಾಗಿ ಅಲ್ಲಿಯೇ ಉಳಿದುಕೊಳ್ಳುತ್ತಿದ್ದೆ. ಹೀಗೆ ನನಗೂ ವಿಷ್ಣುಮೂರ್ತಿಗೂ ಸಂಬಂಧ ಬೆಳೆದು ಬಂದಿತ್ತು. ವಿಷ್ಣುಮೂರ್ತಿ ಪರೋಕ್ಷವಾಗಿ ನನ್ನ ತಮ್ಮನಂತೆಯೇ ಆಗಿಬಿಟ್ಟಿದ್ದರು. ಪ್ರತಿ ಶನಿವಾರ, ತಪ್ಪಿದರೆ ರವಿವಾರ ನಮ್ಮ ಮನೆಗೆ ಬಂದು, ಅವ್ವನ ಮತ್ತು ನಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುತ್ತಿದ್ದರು. ತಮಗೆ ಉಚಿತವಾಗಿ ಸಿಗುತ್ತಿದ್ದ ಔಷಧಿಗಳನ್ನು ತಂದು ಕೊಡುತ್ತಿದ್ದರು.

ಗೋಪಾಲಗೌಡರು ಡಾ. ವಿಷ್ಣುಮೂರ್ತಿಯ ಮದುವೆಯ ಬಗ್ಗೆ ವಿಶೇಷ ಆಸಕ್ತಿ ವಹಿಸಿದ್ದರು, 'ತಮ್ಮ ಮದುವೆ ಬಹಳ ತಡವಾಗಿ ಆಯಿತು, ಮೂರ್ತಿಯದೂ ಹಾಗೆಯೇ ಆಗಬಾರದು' ಎಂದು, ಚೇಷ್ಟೆ ಮಾಡುತ್ತಿದ್ದರು. ಆರಗ ಸಮೀಪದ ತಮ್ಮ ಆಪ್ತರೊಬ್ಬರ ಮಗಳಿಗೆ ಈತ ಒಳ್ಳೆಯ ವರ ಎಂದು ನಿರ್ಧರಿಸಿದ್ದರು. ಧಾರವಾಡದ ತಮ್ಮ ಮಾವ, ಮನೆಯವರನ್ನು ಕಾಣಲು ಅಥವಾ ಸಂಘಟನೆಯ ಕಾರ್ಯಕ್ಕಾಗಿ ಬಂದಾಗಲೆಲ್ಲ ಈ ವಿಷಯ ಪ್ರಸ್ತಾಪಿಸುತ್ತಿದ್ದರು. ಆ ವಿಷಯವಾಗಿಯೇ, ಒಮ್ಮೆ ವಿಷ್ಣುಮೂರ್ತಿಯವರನ್ನು ಕಾಣಲು, ತಮ್ಮ ಸ್ನೇಹಿತರ ಮಗಳ ಬಗ್ಗೆ ವಿವರಿಸಿ, ಮೂರ್ತಿಯವರನ್ನು ಒಪ್ಪಿಸಿಕೊಳ್ಳಲು ಹುಬ್ಬಳ್ಳಿಗೆ ಬಂದರು. ಹೀಗೆ ಬಂದ ಗೌಡರ ಬಗ್ಗೆ ಮೂರ್ತಿಗೂ ಅಭಿಮಾನವಿತ್ತು. ಬಹಳ ಹಿಂದೆಯೇ ತಂದೆಯನ್ನು ಕಳೆದುಕೊಂಡಿದ್ದ ವಿಷ್ಣುಮೂರ್ತಿ ತುಂಬ ಧೈರ್ಯ, ಸಾಹಸ ಮಾಡಿ ದೂರದ ಹುಬ್ಬಳ್ಳಿಗೆ ಮೆಡಿಕಲ್ ಕಲಿಯಲು ಬಂದಿದ್ದರು. ಮನೆತನದಿಂದ ಅಷ್ಟು ಇದ್ದುಳ್ಳವರಲ್ಲ. ವಿಷ್ಣುಮೂರ್ತಿಯ ಮನೆಯಲ್ಲಿ ಇದ್ದವರು ಮುಗ್ಧ ತಾಯಿ, ಅಣ್ಣ, ತಮ್ಮ ಹಾಗೂ ತಂಗಿ. ಅವರೆಲ್ಲರ ಹೊಣೆಯೂ ಪರೋಕ್ಷವಾಗಿ ಮೂರ್ತಿಯವರ ಮೇಲೆಯೇ ಇತ್ತು. ಇಂಥ ಸಂದರ್ಭದಲ್ಲಿ ಒಂದು ಮಹತ್ವದ ಸಂಬಂಧಕ್ಕಾಗಿ, 'ಒಪ್ಪಿಸಿಕೊಳ್ಳಲು' ಬಂದಿದ್ದ ಗೋಪಾಲಗೌಡರಿಗೆ, ತಮ್ಮ ಮನೆ ಮಂದಿ ಅಥವಾ ಸಂಬಂಧದ ಇತರರನ್ನು ವಿಚಾರಿಸದೇ, ಮೂರ್ತಿ ಏನು ಹೇಳುವುದು?

ಆ ಕಾಲದಲ್ಲಿ ಗೌಡರು ಚಂಪಾರನ್ನು, ನನ್ನನ್ನು ಹಾಗೂ ನಾವು ಪ್ರಕಟಿಸುತ್ತಿದ್ದ 'ಸಂಕ್ರಮಣ'ವನ್ನು ನಿಯಮಿತವಾಗಿ ಓದುತ್ತಿದ್ದರು. ವಿಷ್ಣುಮೂರ್ತಿಗೆ ನನ್ನ ಬಗ್ಗೆ ಬಹಳ ಪ್ರೀತಿಯಿತ್ತು. ನನ್ನೊಡನೆ ಮಾತಾಡಿ, ಮುಂದಿನ ನಿರ್ಧಾರ ಎಂದು ಗೌಡರಿಗೆ ಹೇಳಿದ್ದರಂತೆ. ಮದುವೆಯ ಪ್ರಸ್ತಾಪ ಬಾಗಿಲಿಗೇ ಬಂದಿದ್ದರೂ ಮದುವೆಯಾಗಲಿರುವ ಹುಡುಗಿ ವರನಾಗಲಿರುವ ವಿಷ್ಣುಮೂರ್ತಿಯನ್ನು ನೋಡಿರಲಿಲ್ಲ, ಮೂರ್ತಿಯೂ ಹುಡುಗಿಯನ್ನು ನೋಡಿರಲಿಲ್ಲ. ಗೌಡರು ಮಾತ್ರ ತಮ್ಮ ಮನಸ್ಸಿನಲ್ಲಿಯೇ ಆಯ್ಕೆಯನ್ನು ನಿರ್ಧರಿಸಿಬಿಟ್ಟಿದ್ದರು. ಬಹುಶಃ ಕನ್ಯಾಪಕ್ಷದವರಿಗೆ ಮೊದಲೇ ಮೂರ್ತಿಯ ಸ್ಥಿತಿ–ಗತಿ, ಗುಣ–ಸ್ವಭಾವದ ಬಗ್ಗೆ ಸ್ಪಷ್ಟ ಚಿತ್ರಣ ನೀಡಿದ್ದರು. ಆ ಕಾರಣದಿಂದಲೇ ಆ ಕಡೆಯವರು, ಮಗಳನ್ನು ಕರೆದುಕೊಂಡು, ಗೌಡರೊಂದಿಗೆ ಹುಬ್ಬಳ್ಳಿಗೆ ಬಂದು ವುಡ್‌ಲ್ಯಾಂಡ್ಸ್ ಹೋಟೆಲಿನಲ್ಲಿ ಉಳಿದಿದ್ದರು. ಈ ಎಲ್ಲ ವಿವರಗಳು ನಂತರ ತಿಳಿದವು.

ಆಗ ಪೂರ್ವಸೂಚನೆ ನೀಡಲು ನಮ್ಮ ಮನೆಗಳಲ್ಲಿ ದೂರವಾಣಿಗಳಿರಲಿಲ್ಲ, ಪತ್ರ ಬರೆಯುವಷ್ಟು ಸಮಯಾವಕಾಶವೂ ಇರಲಿಲ್ಲ. ಹೀಗಾಗಿ, ಕೆಎಂಸಿಗೆ ಹೋಗಿದ್ದ ಗೌಡರ ಕಾರು, ಮೂರ್ತಿಯ ಅಪೇಕ್ಷೆಯಂತೆ, ಧಾರವಾಡದ ನಮ್ಮ ಮನೆಗೆ ಬಂತು (1969ರ ಅಕ್ಟೋಬರ್ 3). ಆ ಸಂಜೆ ಒಮ್ಮೆಲೇ ಮನೆಗೆ ಬಂದ ಈ ಹಿರಿಯರನ್ನು ಕಂಡು ಆಶ್ಚರ್ಯ, ಅಭಿಮಾನ, ಆನಂದ. ಕಾರಿನಲ್ಲಿ ಮೂರ್ತಿಯ ಜೊತೆಗೆ ಗೋಪಾಲಗೌಡರು, ನನಗೆ ಮೊದಲಿನಿಂದ ಗೊತ್ತಿದ್ದ ಸೋನಕ್ಕ ಮತ್ತು ಆಗ ಹುಬ್ಬಳ್ಳಿಯಲ್ಲಿ ಕಾನೂನು ಕಲಿಯುತ್ತಿದ್ದ ಎನ್.ಡಿ. ರಮೇಶ್ ಇದ್ದರು. (ರಮೇಶ್ ನ್ಯಾಯಮೂರ್ತಿ ಎನ್.ಡಿ. ವೆಂಕಟೇಶ್, ಎನ್.ಡಿ. ಸುಂದರೇಶ್‌ರ ತಮ್ಮ). ಅಂದು ರಾತ್ರಿ ಬಹಳ ಹೊತ್ತಿನ ತನಕ ನಮ್ಮಲ್ಲಿ ಬೈಠಕ್ ನಡೆಯಿತು. ಸೋನಕ್ಕ ಅವ್ವನಿಗೆ ನೆರವಾದರು. ನಾವು ಹರಟೆ ಹೊಡೆಯುತ್ತ ಅನೇಕ ವಿಷಯ ಮಾತಾಡಿದೆವು. ನಮ್ಮ ಮೂರ್ತಿಗೆ ಕನ್ಯಾ ಕೊಡುವ ಬೀಗರು ಮನೆಗೆ ಬಂದಿದ್ದಾರೆ ಎಂದೇ ಭಾವಿಸಿ, ಅವ್ವನ ಮನಸ್ಸು ತುಂಬಿ ಬಿಟ್ಟಿತ್ತು. ಆಕೆ ಬಿಸಿಬಿಸಿ ರೊಟ್ಟಿ ಮಾಡಿದಳು, ಅವಸರದಲ್ಲಿ ತಯಾರಿಸಿದ ಎಣಗಾಯಿ ಪಲ್ಲೆ, ಮೊದಲೇ ಮಾಡಿ ಇಟ್ಟಿದ್ದ ಗುರೆಳ್ಳುಪುಡಿ ಚಟ್ನಿ, ಮೊಸರು. ಅನ್ನ–ಸಾರು. ಬರುವಾಗ ಸೋನಕ್ಕ ಕಟ್ಟಿಸಿಕೊಂಡು ಬಂದಿದ್ದ ಬುಂದೆ. ನಾನು ಸಂಜೆಯಷ್ಟೆ ತಂದಿದ್ದ ಹಾಲು. ಹೀಗೆ ನಮಗೆಲ್ಲರಿಗೂ